# ಕರ್ನಾಟಕ ಲೋಕಾಯುಕ್ತ

**ಸಂ. ಕಂಪ್ಲೆಂಟ್/ಉಪಲೋಕ್/ಬಿಡಿ-10265/2019/ಎಆರ್‌ಇ-9**

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ: 19.9.2022

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3)ರ ಅನ್ವಯ ವರದಿ*

ವಿಷಯ: ಶ್ರೀ.ಪಿ.ರಾಜ, ನಿವೃತ್ತ ಪ್ರಭಾರ ಜಿಲ್ಲಾ ವ್ಯವಸ್ಥಾಪಕ, ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕೋಲಾರ ಇವರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ಎಸಗಿದ ದುರ್ವರ್ತನೆಯ ಕುರಿತು.

****

1. ದೂರುದಾರರಾದ ಶ್ರೀ.ಮುನಿರತ್ನಂ ಬೋವಿ ಬಿನ್ ಪೊಂಡನಬೋವಿ, ಎ.ಮೊತಕಪಲ್ಲಿ ಗ್ರಾಮ, ಕ್ಯಾಸಂಬಳ್ಳಿ ಹೋಬಳಿ, ಕೆ.ಜಿ.ಎಫ್ ತಾಲ್ಲೂಕು, ಕೋಲಾರ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು (1) ಶ್ರೀ.ವಿಜಯಕುಮಾರ್, ಜಿಲ್ಲಾ ವ್ಯವಸ್ಥಾಪಕರು ಮತ್ತು (2) ಶ್ರೀ.ರಾಮಕೃಷ್ಣ, ಕ್ಷೇತ್ರ ಅಭಿವೃದ್ಧಿ ಅಧಿಕಾರಿ, ಕೆ.ಜಿ.ಎಫ್ ಕ್ಷೇತ್ರ, ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕೋಲಾರ (3) ಶ್ರೀ ಆನಂದಪ್ಪ ಜಿಲ್ಲಾ ವ್ಯವಸ್ಥಾಪಕರು (4) ಶ್ರೀ ಟಿ.ವಿಶ್ವನಾಥ, ಜಿಲ್ಲಾ ವ್ಯವಸ್ಥಾಪಕರು (5) ಶ್ರೀ ಎಂ.ನಾಗರಾಜ, ಜಿಲ್ಲಾ ವ್ಯವಸ್ಥಾಪಕರು (6)ಶ್ರೀ ಮಹಾಬಲೇಶ್ವರ ಹೆಗಡೆ, ಜಿಲ್ಲಾ ವ್ಯವಸ್ಥಾಪಕರು (7) ಶ್ರೀ ಎಂ ಚಂದ್ರಪ್ಪ ಜಿಲ್ಲಾ ವ್ಯವಸ್ಥಾಪಕರು ಮತ್ತು **(8) ಶ್ರೀ.ಪಿ.ರಾಜ, ನಿವೃತ್ತ ಪ್ರಭಾರ ಜಿಲ್ಲಾ ವ್ಯವಸ್ಥಾಪಕ, ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕೋಲಾರ** (ಇನ್ನು ಮುಂದೆ "ಎದುರುದಾರ 1 ರಿಂದ 8" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು ತನಿಖೆಗೆ ಕೈಗೆತ್ತಿಕೊಳ್ಳಲಾಗಿದೆ.

**2. ದೂರಿನ ಸಾರಾಂಶವೇನೆಂದರೆ,** 2015-16ನೇ ಸಾಲಿನಲ್ಲಿ ಕೆ.ಜಿ.ಎಫ್. ವಿಧಾನಸಭಾ ಆಯ್ಕೆ ಸಮಿತಿಯಲ್ಲಿ ಆಯ್ಕೆ ಪಟ್ಟಿಯಲ್ಲಿ ಕ್ಯಾಸಂಬಳ್ಳಿ ಹೋಬಳಿ, ಎ. ಮೋತಕಪಲ್ಲಿ ಗ್ರಾಮದ ವಾಸಿಗಳಾದ ಪರಿಶಿಷ್ಟ ಜಾತಿ, ಉಪ ಜಾತಿ ಭೋವಿ ಜನಾಂಗದ (1) ಶ್ರೀ ಲಕ್ಷ್ಮಣ ಭೋವಿ ಬಿನ್ ಪಾಪಣ್ಣ ಭೋವಿ ಎಂಬುವವರಿಗೆ ಕೊಳವೆ ಬಾವಿ ಮಂಜೂರಾಗಿದ್ದು, ಸದರಿ ವ್ಯಕ್ತಿ ಆರ್ಥಿಕ ಸ್ಥಿತಿವಂತರಾಗಿದ್ದು,

ಸದರಿಯವರು ತೋಟಗಾರಿಕೆ ಬೆಳೆಗಳನ್ನು ಬೆಳೆದು ವ್ಯವಸಾಯ ಮಾಡುತ್ತಿದ್ದು, ಇವರಿಗೆ ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕೋಲಾರ ಇವರಿಂದ 2 ಕೊಳವೆ ಬಾವಿಗಳನ್ನು ಮಂಜೂರು ಮಾಡಿ ಅದನ್ನು ಕೊರೆಸುವಾಗ ಶ್ರೀ ರಾಮಪ್ಪ ಬಿನ್ ಗುರುವ ಭೋವಿ ಎಂಬುವವರ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ಶ್ರೀ ಲಕ್ಷ್ಮಣ ಭೋವಿ ಇವರ ಕೊಳವೆ ಬಾವಿಗೆ ಶ್ರೀ ಶ್ರೀರಾಮಪ್ಪ ಬಿನ್ ಗುರುವ ಭೋವಿ ಇವರ ಜಮೀನಿನಲ್ಲಿ ಕೊರೆಸಿದ್ದು, ಸರ್ವೆ ನಂ. 44/ಪಿ-8 ಎಂದು ಇರುತ್ತದೆ. ಆದರೆ, ಶ್ರೀ ಶ್ರೀರಾಮಪ್ಪ ಬಿನ್ ಗುರುವ ಭೋವಿ ಎಂಬುವವರ ಸರ್ವೆ ನಂ.44/ಪಿ-7ರಲ್ಲಿ 1 ಎಕರೆ 10 ಗುಂಟೆ ಜಮೀನಿನಲ್ಲಿ ನಿಗಮದ ಗಂಗಾ ಕಲ್ಯಾಣ ಕೊಳವೆ ಬಾವಿಯನ್ನು ಕೊರೆದಿರುವುದಿಲ್ಲ. ಅಲ್ಲದೆ, ಶ್ರೀ ಶ್ರೀರಾಮಪ್ಪ ಭೋವಿ ಇವರಿಗೆ ಮಂಜೂರಾದ ಕೊಳವೆ ಬಾವಿಯನ್ನು ಸವರ್ಣೀಯ ರೆಡ್ಡಿ ಜನಾಂಗದ ಶ್ರೀ ಮಂಜುನಾಥ ರೆಡ್ಡಿ ಬಿನ್ ರಾಮರೆಡ್ಡಿ ಇವರ ಜಮೀನಿನ ಸರ್ವೆ ನಂ.65 ಮತ್ತು 66ರಲ್ಲಿ ಕೊರೆಸಿರುವುದಾಗಿ ಆಪಾದಿಸಿರುತ್ತಾರೆ.

3. ಮೇಲೆ ಹೇಳಿದ ಇಬ್ಬರು ಫಲಾನುಭವಿಗಳು ಅಂದರೆ ಶ್ರೀ. ಲಕ್ಷ್ಮಣ ಭೋವಿ ಬಿನ್ ಪಾಪಣ್ಣ ಭೋವಿ ಮತ್ತು ಶ್ರೀ. ರಾಮಪ್ಪ ಬಿನ್ ಗುರುವ ಭೋವಿ ರವರ ಆಯ್ಕೆ, ಭೂ ಭೌತ ಸಮಿಕ್ಷಾ ವರದಿ, ಮುಂತಾದ ದಾಖಲೆಗಳ ನಿಜ ಪ್ರತಿಗಳನ್ನು ಸಲ್ಲಿಸುವಂತೆ ಜಿಲ್ಲಾ ವ್ಯವಸ್ಥಾಪಕರು ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕೋಲಾರ ರವರಿಂದ ಕೇಳಲಾಗಿ ಅವರು ದಿ: 26.2.2022 ಪತ್ರದ ಜೊತೆಗೆ ಶ್ರೀ.ಲಕ್ಷ್ಮಣ್ ಭೋವಿ ಬಿನ್ ಪಾಪಣ್ಣ ಭೋವಿ ಮತ್ತು ಶ್ರೀ. ರಾಮಪ್ಪ ಬಿನ್ ಗುರವನಭೋವಿ ಇವರುಗಳ ದಾಖಲಾತಿಗಳ ಧೃಢೀಕರಿಸಿದ ನಕಲು ಪ್ರತಿಗಳನ್ನು ಸಲ್ಲಿಸಿದ್ದಾರೆ.

4. ಜಿಲ್ಲಾ ವ್ಯವಸ್ಥಾಪಕರು ಸಲ್ಲಿಸಿದ ದಾಖಲೆಗಳು ಶ್ರೀ.ಲಕ್ಷ್ಮಣ್ ಭೋವಿ ಮತ್ತು ಶ್ರೀ. ರಾಮಪ್ಪ ರವರ ಜಮೀನಿನಲ್ಲಿ ಬಾವಿ ಕೊರೆಸಿರುವ ಕುರಿತು ಇರುತ್ತದೆ. ಆದರೆ ದೂರಿನ ಆರೋಪಗಳು **2015-16ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆ ಅಡಿ ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕೋಲಾರ ರವರು ಫಲಾನುಭವಿಗಳ ಪಟ್ಟಿಯಲ್ಲಿ ಅನರ್ಹ ಫಲಾನುಭವಿಯನ್ನು ಗುರುತಿಸಿ, ಸದರಿಯವರಿಗೆ ಮಂಜೂರಾದ ಕೊಳವೆ ಬಾವಿಯನ್ನು ಬೇರೆಯವರ ಜಮೀನಿನಲ್ಲಿ ಕೊರೆಸಿ ಸರ್ಕಾರದ ಹಣವನ್ನು ಎದುರುದಾರರು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು** ಇದ್ದು, ಶ್ರೀ. ಲಕ್ಷ್ಮಣ ಭೋವಿ ರವರ ಬದಲಿಗೆ ಶ್ರೀ. ರಾಮಪ್ಪ ಬಿನ್ ಗುರವ ಭೋವಿ ರವರ ಛಾಯಾ ಚಿತ್ರವನ್ನು ಜಿ.ಪಿ.ಎಸ್ ಗೆ ಮಾಡಲಾಗಿದೆಯೇ? ಶ್ರೀ. ರಾಮಪ್ಪ ಬಿನ್ ಗುರವ ಭೋವಿ ರವರಿಗೆ ಮಂಜೂರಾದ ಬಾವಿಯನ್ನು

ಅವರ ಜಮೀನಿನಲ್ಲದೆ ಶ್ರೀ. ಲಕ್ಷ್ಮಣ ಭೋವಿರವರ ಜಮೀನಿನಲ್ಲಿ ಕೊರೆಸಿದ್ದಾರೆಯೇ, ಶ್ರೀ. ಲಕ್ಷ್ಮಣ ಭೋವಿರವರಿಗೆ ಮಂಜೂರಾದ ಬಾವಿಯನ್ನು ಶ್ರೀ. ಮಂಜುನಾಥರೆಡ್ಡಿ ರವರ ಜಮೀನಿನಲ್ಲಿ ಕೊರೆಸಿದ್ದಾರೆಯೇ? ಎಂಬುದನ್ನು ತಿಳಿಯಲು ಕಡತವನ್ನು ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ಕಳುಹಿಸಿ ಸದರಿ ದೂರಿನಲ್ಲಿ ಆಪಾದಿಸಿರುವ ಅಂದರೆ **2015-16ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆ ಅಡಿ ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕೋಲಾರ ರವರು ಫಲಾನುಭವಿಗಳ ಪಟ್ಟಿಯಲ್ಲಿ ಅನರ್ಹ ಫಲಾನುಭವಿಯನ್ನು ಗುರುತಿಸಿ, ಸದರಿಯವರಿಗೆ ಮಂಜೂರಾದ ಕೊಳವೆ ಬಾವಿಯನ್ನು ಬೇರೆಯವರ ಜಮೀನಿನಲ್ಲಿ ಕೊರೆಸಿ ಸರ್ಕಾರದ ಹಣವನ್ನು ಎದುರುದಾರರು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂಬ** ವಿಚಾರದ ಬಗ್ಗೆ ಸ್ಥಳ ತನಿಖೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ತನಿಖಾಧಿಕಾರಿಗಳಾದ ಶ್ರೀ.ಬಣಕಾರ್ ಪ್ರಕಾಶ್ ಕುಮಾರ್, ಲೆಕ್ಕಪರಿಶೋಧನಾದಿಕಾರಿ-2 ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ತನಿಖಾ ವರದಿ ದಿ: 6.6.2022 ಅನ್ನು ಸಲ್ಲಿಸಿರುತ್ತಾರೆ ಸದರಿ ವರದಿಯಲ್ಲಿ ದೂರುದಾರರು ತಮ್ಮ ದೂರಿನ ಆಪಾದನೆಗಳಲ್ಲಿ ಶ್ರೀ ಲಕ್ಷ್ಮಣ ಭೋವಿ ಇವರ ಜಮೀನಿನ ಸರ್ವೆ ನಂ. 44/ಪಿ-8ರಲ್ಲಿ ಜಿಲ್ಲಾ ವ್ಯವಸ್ಥಾಪಕರು, ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕೋಲಾರ ಕಛೇರಿಯಿಂದ ಸದರಿ ನಿಗಮದ ಕೇಂದ್ರ ಕಛೇರಿಯಿಂದ ಸಾಂಸ್ಥಿಕ ಕೋಟಾದಡಿಯಲ್ಲಿ ಫಲಾನುಭವಿಯೆಂದು ಆಯ್ಕೆ ಮಾಡಿ ಇವರಿಗೆ ಕೊಳವೆ ಬಾವಿಯನ್ನು ಮಂಜೂರು ಮಾಡಿದ ಹಿನ್ನೆಲೆಯಲ್ಲಿ ನಿಯಮಾನುಸಾರ ಅಂಗೀಕೃತ ಗುತ್ತಿಗೆದಾರರಿಂದ ಕೊರೆಸಿ, ಸಂಬಂಧಿತ ಉಪಕರಣಗಳನ್ನು ನೀಡಲಾಗಿರುತ್ತದೆ ಎಂದು ನಿಗಮದ ಅಧಿಕಾರಿಗಳು ತಿಳಿಸಿರುತ್ತಾರೆ.

5. ಈ ಹಿನ್ನಲೆಯಲ್ಲಿ, ವಾಸ್ತವವಾಗಿ ಈ ಹಿಂದೆ ಕಾರ್ಯ ನಿರ್ವಹಿಸಿದ ಜಿಲ್ಲಾ ವ್ಯವಸ್ತಾಪಕರು ಮತ್ತು ಎದುರುದಾರರೊಡನೆ ಸ್ಥಳ ತನಿಖೆ ಮಾಡಲು ಅಪಾದಿತ ಜಮೀನುಗಳುಗೆ ದಿನಾಂಕ:11.05.2022 ರಂದು ತೆರಳಲಾಯಿತು. ಈ ಸಮಯದಲ್ಲಿ ಸದರಿ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಬೆಸ್ಕಾಂ ಅಧಿಕಾರಿಗಳು ಹಾಗೂ ದೂರುದಾರರು ಸಹಾ ಹಾಜಾರಿದ್ದರು. ಶ್ರೀ ಲಕ್ಷ್ಮಣ ಭೋವಿ ರವರು ತೀರಿಕೊಂಡಿದ್ದು, ಅವರ ಮಗನಾದ ಶ್ರೀ ರಾಜಕುಮಾರ್ ಬಿನ್ ಲಕ್ಷ್ಮಣ್‌ಭೋವಿ ರವರು ಹಾಜರಿದ್ದು, ಸದರಿ ಜಮೀನಿನಲ್ಲಿ ಒಂದು ಬೋರ್‌ವೆಲ್‌ನ್ನು ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಕೊರೆದು ಒಂದು ಟಿ.ಸಿ. ಸಂಪರ್ಕವನ್ನು ನೀಡಿ, ಕೊಳವೆ ಬಾವಿಯ ನೀರನ್ನು ಬಳಕೆ ಮಾಡಿಕೊಳ್ಳಲು ಅಗತ್ಯವಿರುವ ಉಪಕರಣಗಳನ್ನು ನೀಡಿವುದು, ದೂರುದಾರರು,

ಫಲಾನುಭವಿಗಳು ಮತ್ತು ಸ್ಥಳದಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳು ದೃಢ ಪಡಿಸಿರುತ್ತಾರೆ. ಇದರಲ್ಲಿ ದೂರುದಾರರ ಯಾವುದೇ ತಕರಾರು ಇರುವುದಿಲ್ಲ.

6. ಮುಂದೆ ದೂರುದಾರರು, ಶ್ರೀ ಶ್ರೀರಾಮಪ್ಪ ಬೋವಿ ರವರ ಜಮೀನಿನ ಸರ್ವೆ ನಂ.44/ಪಿ-7ರಲ್ಲಿ ಕೊರೆಸಲಾಗಿದೆ ಎನ್ನಲಾದ ಕೊಳವೆಬಾವಿಯನ್ನು ಪರಿಶೀಲಿಸುವಂತೆ ಕೋರಿದರು. ಅಲ್ಲಿಯೇ ಪಕ್ಕದಲ್ಲಿದ್ದ, ಶ್ರೀರಾಮಪ್ಪ ರವರ ಜಮೀನನ್ನು ಪರಿಶೀಲಿಸಲಾಗಿ, ಸದರಿಯವರ ಜಮೀನಿನಲ್ಲಿ ಯಾವುದೇ ಕೊಳವೆಬಾವಿ ಇರುವುದಿಲ್ಲ. ಈ ಕುರಿತು ಫಲಾನುಭವಿಗಳನ್ನು ವಿಚಾರಿಸಲಾಗಿ, ಸದರಿಯವರ ಜಮೀನಿನಲ್ಲಿ ನೀರಿನ ಪಾಯಿಂಟ್ ಇಲ್ಲದಿರುವುದರಿಂದ ಕೊಳವೆಬಾವಿಯನ್ನು ಪುನಃ ಶ್ರೀ ಲಕ್ಷ್ಮಣಭೋವಿರವರ ಜಮೀನಿನಲ್ಲಿ ಕೊರೆಸಿರುವುದಾಗಿ ತಿಳಿಸಿರುತ್ತಾರೆ. ಈ ಸಮಯದಲ್ಲಿ ದೂರುದಾರರು ಮಧ್ಯೆ ಪ್ರವೇಶಿಸಿ ಸದರಿಯವರು ತೋರಿಸುತ್ತಿರುವ ಕೊಳವೆ ಬಾವಿಯು, ಸುಮಾರು 20 ವರ್ಷಗಳಿಂದ ಬಳಕೆಯಲ್ಲಿದ್ದು, ಅದನ್ನು , ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕೋಲಾರ ಕಛೇರಿಯಿಂದ ಕೊರೆಸಿರುವುದಿಲ್ಲವೆಂದು ಮತ್ತು ಈ ಕೊಳವೆಬಾವಿಗೆ ಗಂಗಾ ಕಲ್ಯಾಣ ಯೋಜನೆಯನ್ವಯ ಒಂದು ಪ್ರತ್ಯೇಕ ಟಿ.ಸಿ. ನೀಡಿ, ಯಾವುದೇ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಬದಲಿಗೆ ಸಂಬಂಧಪಟ್ಟ ತಾಲ್ಲೂಕು ಕ್ಷೇತ್ರ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಪಿ ರಾಜ ರವರು ಮತ್ತು ಫಲಾನುಭವಿಗಳಾದ ಶ್ರೀ ಶ್ರೀರಾಮಪ್ಪ ಮತ್ತು ಲಕ್ಷ್ಮಣಭೋವಿ ರವರ ಕುಟುಂಬಸ್ಥರು ನಿಗಮದಿಂದ ಮಂಜೂರಾದ ಕೊಳವೆ ಬಾವಿಯನ್ನು ಅದೇ ಗ್ರಾಮದ ರೆಡ್ಡಿ ಜನಾಂಗದ ಶ್ರೀ ಮಂಜುನಾಥ ರೆಡ್ಡಿ ಇವರ ಜಮೀನಿನಲ್ಲಿ ಕೊರೆಸಿ, ಕರ್ತವ್ಯಲೋಪ ಮತ್ತು ಸರ್ಕಾರದ ಹಣ ದುರುಪಯೋಗ ಮಾಡಿರುತ್ತಾರೆಂದು ತಿಳಿಸಿದರು. ಇದನ್ನು ಪುಷ್ಟೀಕರಿಸುವಂತೆ ಬೆಸ್ಕಾಂ ಕಛೇರಿಯ ಅಧಿಕಾರಿಯಾದ ಶ್ರೀ ಕೆ.ಯು. ಶ್ರೀನಿವಾಸಗೌಡ, ಕಿರಿಯ ಅಭಿಯಂತರರು (ವಿದ್ಯುತ್), ಸುಂದರಪಾಳ್ಯ ಶಾಖೆ ರವರು ಸಹಾ ಸದರಿ ನಿಗಮದಿಂದ ಕೊಳವೆಬಾವಿಯನ್ನು ಶ್ರೀ ಮಂಜುನಾಥರೆಡ್ಡಿ ರವರ ಜಮೀನಲ್ಲಿ ಕೊರೆಸಿದ್ದು, ಕೊಳವೆಬಾವಿಗೆ ಟಿ.ಸಿ. ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ನೀಡಿದ ನಕ್ಷೆಯನುಸಾರ ವಿದ್ಯುತ್ ಸಂಪರ್ಕವನ್ನು ಮಂಜುನಾಥರೆಡ್ಡಿ ರವರ ಜಮೀನಿನಲ್ಲಿ ಅಳವಡಿಸಲಾಗಿತ್ತೆಂದು ತಿಳಿಸಿರುತ್ತಾರೆ. ಈ ಹಂತದಲ್ಲಿ ಅವರಿಗೆ ಸದರಿ ಮಂಜೂರಾದ ಜಮೀನಿನ ಸರ್ವೆ ನಂ ತಿಳಿದಿರುವುದಿಲ್ಲವೆಂದು ಹಾಗೂ ಫಲಾನುಭವಿಗಳು ತೋರಿಸಲಾದ ಸ್ಥಳದಲ್ಲಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿದೆ ಎಂದು ತಿಳಿಸಿ, ಹೇಳಿಕೆಯನ್ನು ನೀಡಿರುತ್ತಾರೆ. ಸದರಿಯವರ ಹೇಳಿಕೆಯನ್ನು ಮತ್ತು ದೂರುದಾರರ ಹೇಳಿಕೆಯನ್ನು

ಗುರ್ತಿಸಿದೆ. ವಿವಾದಿತ ಜಮೀನಿನ ಫಲಾನುಭವಿಗಳಾದ ಶ್ರೀ ಶ್ರೀರಾಮಪ್ಪ ಬಿನ್ ಗುರುವಿನಭೋವಿ ಹಾಗೂ ಶ್ರೀ ರಾಜಕುಮಾರ್ ಬಿನ್ ಲಕ್ಷ್ಮಣಭೋವಿ ರವರ ಹೇಳಿಕೆಗಳನ್ನು ಪಡೆದಿರುತ್ತಾರೆ.

7. ಮುಂದುವರೆದು, ಶ್ರೀ ಮಂಜುನಾಥ ರೆಡ್ಡಿ ಇವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗಕ್ಕೆ ಒಳಪಡದೇ ಇದ್ದರೂ, ನಿಗಮದ ವತಿಯಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ನಿಯಮಬಾಹಿರವಾಗಿ ಕೊಳವೆ ಬಾವಿಯನ್ನು ಮತ್ತು ವಿದ್ಯುತ್ ಸಂಪರ್ಕವನ್ನು ನೀಡಿರುವುದಾಗಿ ದೂರುದಾರರು ಆಪಾದಿಸಿರುತ್ತಾರೆ. ಈ ಕುರಿತು ಶ್ರೀ ಮಂಜುನಾಥ ರೆಡ್ಡಿ ರವರ ಜಮೀನಿನ ಸರ್ವೆ ನಂ. 65 ಮತ್ತು 66ಕ್ಕೆ ಬೇಟಿ ನೀಡಿ ಪರಿಶೀಲಿಸಲಾಗಿ, ಸಂಭಂಧಪಟ್ಟ ಬೆಸ್ಕಾಂ ಅಧಿಕಾರಿಗಳು ಮತ್ತು ದೂರುದಾರರು ಶ್ರೀ ಮಂಜುನಾಥ ರೆಡ್ಡಿ ರವರ ಜಮೀನಿನಲ್ಲಿಯೇ ನಿಗಮದಿಂದ ನೀಡಲಾದ ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿನ ಕೊರೆಯಿಸಿ, ಟಿ.ಸಿ ಹಾಗೂ ಇತರೆ ಉಪಕರಣಗಳನ್ನು ನೀಡಿರುವುದಾಗಿ ದೃಢಪಡಿಸಿರುತ್ತಾರೆ. ಸದರಿ ಸಮಯದಲ್ಲಿ ಛಾಯ ಚಿತ್ರಗಳನ್ನು ಸಹಾ ಪಡೆಯಲಾಗಿರುತ್ತದೆ.

**8. ಈ ಹಿನ್ನಲೆಯಲ್ಲಿ ದೂರುದಾರರು ಮಾಡಿರುವ ಆರೋಪವು ಸಾಬೀತಾಗಿದ್ದು, ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕೋಲಾರ ಜಿಲ್ಲಾ ಕಛೇರಿಯ ವ್ಯಾಪ್ತಿಯಲ್ಲಿ ಕೆ.ಜಿ.ಎಫ್ ತಾಲ್ಲೂಕು ಕ್ಷೇತ್ರಾಭಿವೃದ್ಧಿ ಅಧಿಕಾರಿಯಾಗಿ ಹಾಗೂ ಪ್ರಭಾರ ಜಿಲ್ಲಾ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿದ ಶ್ರೀ ಪಿ ರಾಜು ರವರು, ನಿಗಮದ ನಿಯಮಗಳನ್ನು ಉಲ್ಲಂಘಿಸಿ, ಸರ್ಕಾರದ ಹಣವನ್ನು ದುರುಪಯೋಗ ಮಾಡಿರುವುದು ಸ್ಪಷ್ಟವಾಗಿರುತ್ತದೆ.** ನಿಗಮದ ನಿಯಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯನ್ನು ಪಡೆಯಲು ಆಯ್ಕೆಯಾದ ಫಲಾನುಭವಿಗಳ ಜಮೀನಿನಲ್ಲಿ ಕೊಳವೆಬಾವಿಗಳನ್ನು ಅನುಷ್ಠಾನಗೊಳಿಸುವಾಗ ತಾಲ್ಲೂಕು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಶೇ 100 ರಷ್ಟು ತಪಾಸಣಾ ದೃಢೀಕರಣವನ್ನು ಮಾಡಬೇಕೆಂದು ತಿಳಿಸಿದ್ದು, ಹಾಗೂ ಅನುಷ್ಠಾನದ ಸಮಯದಲ್ಲಿ ಕಡ್ಡಾಯವಾಗಿ ಜಮೀನಿನಲ್ಲಿ ಇರತಕ್ಕದ್ದು ಎಂದು ಸೂಚಿಸಲಾಗಿದೆ. ಅದರನ್ವಯ ತಾಲ್ಲೂಕು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಾದ **ಶ್ರೀ ಪಿ. ರಾಜರವರು ಮೂಲ ಫಲಾನುಭವಿಯ ಜಮೀನಿನಲ್ಲಿ ಕೊಳವೆಬಾವಿಯನ್ನು ಅಳವಡಿಸದೆ, ಬದಲಿ ಜಮೀನಲ್ಲಿ ಕೊಳವೆ ಬಾವಿಯನ್ನು ಅಳವಡಿಸಿ, ಜಿಲ್ಲಾ ವ್ಯವಸ್ಥಾಪಕರಿಗೆ ತಪ್ಪು ಮಾಹಿತಿ ನೀಡಿ, ಗುತ್ತಿಗೆದಾರರಿಂದ ಬಿಲ್ಲುಗಳನ್ನು ತಯಾರಿಸಿ, ಪಾವತಿಗಾಗಿ ಮೇಲಾಧಿಕಾರಿಗಳಿಗೆ ಸಲ್ಲಿಸಿ, ಅಧಿಕಾರ ದುರುಪಯೋಗ ಮಾಡಿ, ಯೋಜನೆಯ ಮೂಲ ಉದ್ದೇಶ ಮತ್ತು ಸರ್ಕಾರದ ಅನುದಾನವನ್ನು**

**ದುರುಪಯೋಗ ಮಾಡಿರುತ್ತಾರೆ.** ಪ್ರಸ್ತುತ ನೀಡಿರುವ ಒಂದು ಪ್ರಕರಣದಲ್ಲಿ ದಾಖಲಾಗಿರುವ 2 ಕೊಳವೆಬಾವಿಗಳಲ್ಲಿ, ಒಂದು ಸಂಪೂರ್ಣವಾಗಿ ಸುಳ್ಳಾಗಿದ್ದು, ಇವರ ಒಟ್ಟು ಅಧಿಕಾವಧಿಯಲ್ಲಿ ಅನುಷ್ಠಾನಗೊಳಿಸಿರುವ ಕೊಳವೆಬಾವಿಗಳ ಕುರಿತು ವಿಶೇಷ ತನಿಖೆ ಮಾಡಿಸಿದಲ್ಲಿ ಇನ್ನೂ ಅನೇಕ ಇದೇ ತರಹದ ಪ್ರಕರಣಗಳು ಆಗಿರಬಹುದೆಂಬ ಸಂಶಯ ತನಿಖೆಯಲ್ಲಿ ಹೊರಬಂದಿರುತ್ತದೆ.

9. ಉಳಿದಂತೆ, ಈ ಪ್ರಕರಣದಲ್ಲಿ ಎದುರುದಾರರಾಗಿರುವ ಇತರೆ ಅಧಿಕಾರಿಗಳಲ್ಲಿ ಜಿಲ್ಲಾ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಸಿದ ಶ್ರೀ ಟಿ.ವಿಶ್ವನಾಥ, ಶ್ರೀ ಎಂ.ನಾಗರಾಜ, ಶ್ರೀ ಮಹಾಬಲೇಶ್ವರ ಹೆಗಡೆ, ಶ್ರೀ ಆನಂದಪ್ಪ ಮತ್ತು ಶ್ರೀ ಎಂ ಚಂದ್ರಪ್ಪ ರವರ ಅವಧಿಯಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ವಹಿಸಲಾದ ಕೆಲಸಗಳಲ್ಲಿ ಯಾವುದೇ ಲೋಪದೋಷಗಳು ತನಿಖೆಯಲ್ಲಿ ಕಂಡುಬದಿರುವುದಿಲ್ಲ. ಶ್ರೀ ವಿಜಯಕುಮಾರ್, ಜಿಲ್ಲಾ ವ್ಯವಸ್ಥಾಪಕರು ಮತ್ತು ಶ್ರೀ ರಾಮಕೃಷ್ಣ, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು, ದೂರುದಾರರು ಈ ಸಂಸ್ಥೆಗೆ ಪ್ರಕರಣವನ್ನು ದಾಖಲಿಸುವಾಗ ಕರ್ತವ್ಯ ನಿರ್ವಹಿಸುತ್ತಿದ್ದು, ವಿವಾದಿತ ಕಾಮಗಾರಿಗಳು ನಿಗಮದಿಂದ ಅನುಷ್ಠಾನಗೊಳಿಸುವಾಗ ಸದರಿಯವರುಗಳು ಕಾರ್ಯ ನಿರ್ವಹಿಸಿರುವುದಿಲ್ಲ. ಹಾಗಾಗಿ, 1 ರಿಂದ 7ನೇ ಎದುರುದಾರರ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗಿಲ್ಲವಾದ್ದರಿಂದ 1 ರಿಂದ 7ನೇ ಎದುರುದಾರರನ್ನು ಈ ಪ್ರಕರಣದಿಂದ ಕೈಬಿಡಬಹುದು.

10. ಸದರಿ ತನಿಖಾ ವರದಿಯನ್ನು 8ನೇ ಎದುರುದಾರರಿಗೆ ಕಳುಹಿಸಿ ವರದಿಯ ಮೇಲೆ ಆಕ್ಷೇಪಣೆಯನ್ನು ಕೇಳಲಾಗಿತ್ತು.

11. ಸದರಿ ಆಕ್ಷೇಪಣೆಯಲ್ಲಿ ಶ್ರೀ.ರಾಮಪ್ಪ ಬಿನ್ ಗುರುವನಭೋವಿ ರವರ ಕೃಷಿ ಜಮೀನಿನಲ್ಲಿ, ನಿಗಮದ ಗುತ್ತಿಗೆದಾರರ ಕಂಪನಿಯಾದ ಮೇ: ACUTE Services ವತಿಯಿಂದ ಫಲಾನುಭವಿ ಜಮೀನಿನಲ್ಲಿ ನೀರಿನ ಲಭ್ಯತೆ ಬಗ್ಗೆ ಭೂ ಚೌತ ಸರ್ವೆ ಕಾರ್ಯ ಮಾಡಿದಾಗ ವ್ಯವಸಾಯಕ್ಕೆ ಸಾಕಾಗುವಷ್ಟು ನೀರು ಲಭ್ಯತೆ ಇಲ್ಲ ಎಂದು ತಿಳಿಸಿ, ಶ್ರೀ.ಲಕ್ಷ್ಮಣಭೋವಿ ಬಿನ್ ಪಾಪಣ್ಣ ಭೋವಿ ಹಾಗೂ ಶ್ರೀ.ರಾಮಪ್ಪ ಬಿನ್ ಗುರುವನ ಭೋವಿ, ಕೃಷಿ ಜಮೀನುಗಳು ಅಕ್ಕ-ಪಕ್ಕದಲ್ಲೇ ಜಂಟಿ ಇದ್ದು ಸಮಾನ ಮನಸ್ಥಿತಿಯುಳ್ಳ ಒಳ್ಳೆಯ ಮಾನವೀಯತೆಯುಳ್ಳ ಸಂಬಂಧಿಕರಾಗಿರುತ್ತಾರೆಂದೆ ತಿಳಿಸಿರುತ್ತಾರೆ. ಶ್ರೀ.ಲಕ್ಷ್ಮಣಭೋವಿ ಹಾಗೂ ಶ್ರೀ.ರಾಮಪ್ಪನ ಗಡಿ ಜಮೀನಿನಲ್ಲಿ ವ್ಯವಸಾಯಕ್ಕೆ ಸಾಕಾಗುವಷ್ಟು ನೀರು,

Vi

ಲಭ್ಯತೆ ಇರುವುದಾಗಿ, ಗುತ್ತಿಗೆದಾರ ಕಂಪನಿ ನೇಮಿಸಿದ್ದ, ಭೂ ವಿಜ್ಞಾನಿಗಳು ತಿಳಿಸಿರುತ್ತಾರೆ. ಎರಡೂ ಫಲಾಪೇಕ್ಷಿಗಳ ಪರಸ್ಪರ ಒಪ್ಪಿಗೆ ಮೇರೆಗೆ ಗುತ್ತಿಗೆದಾರ ಕಂಪನಿಯವರು ಲಕ್ಷ್ಮಣ ಭೋವಿ–ಶ್ರೀ.ರಾಮಪ್ಪನ ಗಡಿಗೆ ಹತ್ತಿರವಿರುವ ಜಮೀನಿನಲ್ಲಿ ಒಂದು ಯಶಸ್ವಿ ಕೊಳವೆ ಬಾವಿಯನ್ನು ಕೊರೆದಿರುತ್ತಾರೆಂದು ಹಾಗೂ ಗುತ್ತಿಗೆದಾರ ಕಂಪನಿಗೆ ಫಲಾನುಬವಿಗಳ ಜಮೀನಿನಲ್ಲಿ ಕೊಳವೆ ಬಾವಿ ಕೊರೆಯಲು ಕಾರ್ಯಾದೇಶ ನೀಡಲಾಗಿರುತ್ತದೆ ಮತ್ತು ಶ್ರೀ.ಮಂಜುನಾಥರೆಡ್ಡಿ ರವರು ತಮ್ಮ ಸ್ವಂತ ಖರ್ಚಿನಿಂದ ಖಾಸಗಿಯಾಗಿ ಕೊಳವೆ ಬಾವಿ ಕೊರೆಸಿಕೊಂಡಿದ್ದಾರೆಂದು ತಿಳಿಸಿರುತ್ತಾರೆ.

12. ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ, ಈ ದೂರು ಪ್ರಕರಣದಲ್ಲಿ ದೂರುದಾರರು ಆರೋಪಿಸಿರುವಂತೆ ಮೂಲ ಫಲಾನುಭವಿಗಳಾದ ಶ್ರೀ ಶ್ರೀರಾಮಪ್ಪ ರವರ ಜಮೀನಿನಲ್ಲಿ ಬೋರ್‌ವೆಲ್‌ಗಳನ್ನು ಕೊರೆಸಿರುವುದಿಲ್ಲ. ಬದಲಾಗಿ ಸರ್ವೆ ನಂ.65 ಮತ್ತು 66ರಲ್ಲಿ ಶ್ರೀ ಮಂಜುನಾಥರೆಡ್ಡಿ ರವರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಸಿರುವು ದೃಢಪಟ್ಟಿರುತ್ತದೆ ಮತ್ತು ಶ್ರೀ ಮಂಜುನಾಥ ರೆಡ್ಡಿ ಇವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗಕ್ಕೆ ಒಳಪಡದೇ ಇದ್ದರೂ, ನಿಗಮದ ವತಿಯಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ನಿಯಮಬಾಹಿರವಾಗಿ ಕೊಳವೆ ಬಾವಿಯನ್ನು ಮತ್ತು ವಿದ್ಯುತ್ ಸಂಪರ್ಕವನ್ನು ನೀಡಿರುವುದು ಸಾಬೀತಾಗಿರುತ್ತದೆ. ಮುಂದುವರೆದು, ಸದರಿ ಗಂಗಾ ಕಲ್ಯಾಣ/ವೈಯಕ್ತಿಕ ಕೊಳವೆಬಾವಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಮೀಸಲಿದ್ದ, ಕೊಳವೆಬಾವಿಯನ್ನು ಬೇರೆಯವರ ಮತ್ತು ಬೇರೆ ಜನಾಂಗದವರ ಜಮೀನಿನಲ್ಲಿ ಕೊರೆಸಿ ನಿಯಮವನ್ನು ಉಲ್ಲಂಘನೆ ಮಾಡಿ, ಕರ್ನಾಟಕ ರಾಜ್ಯ ಖಜಾನೆಗೆ ರೂ.1.50 ಲಕ್ಷ ನಷ್ಟವನ್ನು ಉಂಟು ಮಾಡಿರುವುದು ಲೆಕ್ಕ ತನಿಖೆಯಿಂದ ಸಾಬೀತಾಗಿರುತ್ತದೆ. ಎದುರುದಾರರು ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ಧೇ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021)ರ ನಿಯಮ 3(1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

13. ಮೇಲಿನ ಕಾರಣಗಳಿಂದ ಎದುರುದಾರರಾದ ಶ್ರೀ.ಪಿ.ರಾಜು, ನಿವೃತ್ತ ಪ್ರಭಾರ ಜಿಲ್ಲಾ ವ್ಯವಸ್ಥಾಪಕ, ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕೋಲಾರ ರವರು

ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)(i) ರಿಂದ (iii) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಎದುರುದಾರರ ಶ್ರೀ.ಪಿ.ರಾಜು, ನಿವೃತ್ತ ಪ್ರಭಾರ ಜಿಲ್ಲಾ ವ್ಯವಸ್ಥಾಪಕ, ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕೋಲಾರ ಇವರು ದಿ: 31.1.2019 ರಂದು ಸೇವೆಯಿಂದ ನಿವೃತ್ತಿಯಾಗಿದ್ದು, ಸದರಿಯವರು ಎಸಗಿದ ದುರ್ನಡತೆ ಮತ್ತು ರೂ.1.50 ಲಕ್ಷ ನಷ್ಟಕ್ಕೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ ನಿಯಮ 214 (2) (ಬಿ)(i) ಅಡಿಯಲ್ಲಿ ಅನುಮತಿಸಿ, ಕೆ.ಸಿ.ಎಸ್.ಆರ್. (ಸಿಸಿಎ) **14-ಎ ಅಡಿಯಲ್ಲಿ** ಇಲಾಖಾ ವಿಚಾರಣೆ ಮಾಡಲು 'ಉಪಲೋಕಾಯುಕ್ತರಿಗೆ' ವಹಿಸುವಂತೆ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

14. ಮುಂದುವರೆದು, ಎದುರುದಾರ ಶ್ರೀ.ಪಿ.ರಾಜು, ನಿವೃತ್ತ ಪ್ರಭಾರ ಜಿಲ್ಲಾ ವ್ಯವಸ್ಥಾಪಕ, ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕೋಲಾರ ರವರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಸ್ವೀಕೃತವಾದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ನಿರ್ದೇಶಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

19/9/20

**(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ.**